*ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರವರ ಅಧ್ಯಕ್ಷತೆಯಲ್ಲಿ ದಿನಾಂಕ: 04.01.2019 ರಂದು ಮಧ್ಯಾಹ್ನ: 3.30 ಗಂಟೆಗೆ ನಡೆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳ ಸರಳೀಕರಣ/ವಿಲೀನ/ ಅನುದಾನ ಮರುಹಂಚಿಕೆ ಸಭೆಯ ನಡವಳಿಗಳು.*

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು 2018-19 ನೇ ಸಾಲಿನ ಯೋಜನೆಗಳ ಸರಳೀಕರಣ/ವಿಲೀನ/ಅನುದಾನ ಮರುಹಂಚಿಕೆ ಕುರಿತು ನಡೆಸಿದ ಸಭೆಯಲ್ಲಿ ಹಿರಿಯ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರು ಹಾಗೂ ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಈಗಾಗಲೇ ಹಿಂದಿನ ಸಭೆಯಲ್ಲಿ ಸೂಚಿಸಿದ್ದ ಯೋಜನೆಗಳ ಬಾಬ್ತು ಕೈಗೊಂಡ ನಿರ್ಣಯಗಳು ಈ ಕೆಳಕಂಡಂತಿವೆ:

1. ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ ಜಾರಿ ಯೋಜನೆಯನ್ನು ಐ.ಆರ್‌ಇ.ಪಿ.ಯೋಜನಾ ಕೇಂದ್ರದ ಸ್ಥಾಪನೆಯೊಂದಿಗೆ ವಿಲೀನಗೊಳಿಸಲು ಹಾಗೂ 2019-20 ಆರ್ಥಿಕ ಸಾಲಿನ ಆಯವ್ಯಯಕ್ಕೆ ಐ.ಆರ್.ಇ.ಪಿ ಯೋಜನಾ ಕಾರ್ಯಕ್ರಮವನ್ನು ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆಯೆಂದು ಬದಲಾಯಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

   **(ಕ್ರಮ: ನಿರ್ದೇಶಕರು, ಗ್ರಾಮೂಸೌ-2, ಕಾರ್ಯನಿರ್ವಾಹಕ ಅಧಿಕಾರಿಗಳು, MGIRED, ಆಂತರಿಕ ಆರ್ಥಿಕ ಸಲಹೆಗಾರರು)**

2. 2019-20 ರ ಆರ್ಥಿಕ ಸಾಲಿಗೆ ತಾಲ್ಲೂಕು ಪಂಚಾಯತಿಗಳಿಗೆ ಸಂಯುಕ್ತ ಅನುದಾನಗಳು ಯೋಜನೆಯ ಶೀರ್ಷಿಕೆ/ಹೆಸರನ್ನು ಬದಲಾಯಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ಈ ಯೋಜನೆಯೊಂದಿಗೆ ತಾಲ್ಲೂಕು ಪಂಚಾಯತಿ ಅಭಿವೃದ್ಧಿ ಅನುದಾನಗಳು – 2515-00-197-1-22, ಮತ್ತು ತಾಲ್ಲೂಕು ಪಂಚಾಯತಿಗಳಿಗೆ ರಸ್ತೆ ದುರಸ್ಥಿ ಮತ್ತು ಸಾಗಾಣಿಕೆ 2215-01-197-2-01 ಹಾಗೂ ಗ್ರಾಮ ಪರಿಮಿತಿಗಳಲ್ಲಿನ ರಸ್ತೆಗಳ ಕಾಂಕ್ರೀಟ್/ಡಾಂಬರೀಕರಣ - 3054-80-197-1-01 ಯೋಜನೆಗಳನ್ನು ವಿಲೀನಗೊಳಿಸಿ ಒಟ್ಟು ಅನುದಾನವನ್ನು 2515-00-197-1-07 (ನಿರ್ಬಂದ ರಹಿತ ) ಲೆಕ್ಕ ಶೀರ್ಷಿಕೆಗೆ ಒದಗಿಸುವುದು.

   (ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ ಹಾಗೂ ಪಂ.ರಾಜ್ – 2)

3. ಸೋಲಾರ್ ದೀಪಗಳು ಮತ್ತು ಅನಿಲ ಯೋಜನೆಗಳನ್ನು ಮುಕ್ತಾಯಗೊಳಿಸುವುದು ಹಾಗೂ ಸದರಿ ಯೋಜನೆಯಡಿ ನಿಗದಿಪಡಿಸಿರುವ ಅನುದಾನ ರೂ. 3.50 ಕೋಟಿಗಳನ್ನು ತಾಲ್ಲೂಕು

ಪಂಚಾಯತಿ ಕಟ್ಟಡಗಳ ನಿರ್ಮಾಣಕ್ಕೆ ಆರ್ಥಿಕ ಇಲಾಖೆಗೆ ತುರ್ತಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

(ಕ್ರಮ: ನಿರ್ದೇಶಕರು, ಗ್ರಾಮೂಸೌ)

4. ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯವಲಯದ ವೇತನದ ಲೆಕ್ಕ ಶೀರ್ಷಿಕೆ 2215-01-001-1-01 ಯೊಂದಿಗೆ ತರಬೇತಿ ಯೋಜನೆ '2215-01-003-0-01' ಹಾಗೂ ದುರಸ್ತಿ ಮತ್ತು ಸಾಗಾಣಿಕೆ '2215-01-052-3-00' ಗಳನ್ನು ವಿಲೀನಗೊಳಿಸಿ 2019-20 ನೇ ಸಾಲಿಗೆ ಒಂದೇ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ನಿಗದಿಪಡಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ ಮತ್ತು ಮುಖ್ಯ ಇಂಜಿನಿಯರಿಂಗ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ)

5. 2019-20 ರ ಸಾಲಿಗೆ ತಾಲ್ಲೂಕು ಪಂಚಾಯತಿ ದುರಸ್ತಿ ಮತ್ತು ಸಾಗಣೆ ಲೆಕ್ಕ ಶೀರ್ಷಿಕೆ 2215-01-197-2-01 ಯಡಿ ನಿಗದಿಪಡಿಸಲಾಗುವ ಅನುದಾನವನ್ನು ತಾಲ್ಲೂಕು ಪಂಚಾಯತಿ ಕಟ್ಟಡಗಳಿಗೆ ಬಳಸಿಕೊಳ್ಳಲು ಜಿಲ್ಲಾವಲಯದಡಿ ಅನುದಾನ ಒದಗಿಸಿಕೊಳ್ಳಲು ಅನುಮೋದನೆಯನ್ನು ಪಡೆಯುವುದು.

(ಕ್ರಮ : ನಿರ್ದೇಶಕರು, ಪಂ.ರಾಜ್-2)

6. 2018-19 ನೇ ಸಾಲಿಗೆ ಗ್ರಾಮ ಪಂಚಾಯತಿಗಳಿಗೆ ವಿವಿಧ ಅಭಿವೃದ್ಧಿ ಯೋಜನೆಯಡಿ ನಿಗದಿಪಡಿಸಲಾದ ಅನುದಾನ ರೂ. 20.00 ಕೋಟಿಗಳಲ್ಲಿ ರೂ. 1.00 ಕೋಟಿಯನ್ನು ವಿಕೇಂದ್ರೀಕರಣ ವಿಶ್ಲೇಷಣಾ ಕೋಶ ಸಮಿತಿಯ ಆಡಳಿತ ವೆಚ್ಚಕ್ಕೆ ನಿಗದಿಪಡಿಸಿದ್ದು, ಉಳಿದ ರೂ. 19.00 ಕೋಟಿಗಳ ಅನುದಾನವನ್ನು ತಾಲ್ಲೂಕು ಪಂಚಾಯತಿ ಕಟ್ಟಡಗಳ ನಿರ್ಮಾಣಕ್ಕೆ ವಿನಿಯೋಗಿಸಲು ಜಿಲ್ಲಾವಲಯದಡಿ ಮರುಹಂಚಿಕೆ ಮಾಡಲು ಕ್ರಮವಹಿಸುವುದು.

(ಕ್ರಮ : ನಿರ್ದೇಶಕರು, ಪಂ.ರಾಜ್-2)

7. ಕರ್ನಾಟಕ ಪಂಚಾಯತ್ ರಾಜ್ ಅನುದಾನದಲ್ಲಿ (ರಾಜ್ಯವಲಯ) ರೂ. 6.04 ಕೋಟಿಗಳಲ್ಲಿ ರೂ. 3.00 ಕೋಟಿಗಳನ್ನು ಅಗತ್ಯತೆಯಿರುವ ಪಂಚಾಯತ್ ರಾಜ್ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸುವುದು.

(ಕ್ರಮ : ನಿರ್ದೇಶಕರು, ಪಂ.ರಾಜ್-2)

8.ಜಿಲ್ಲಾ ಪಂಚಾಯತಿಗಳ ಕಟ್ಟಡಗಳ ಕುರಿತು ತಕ್ಷಣವೇ ಸಚಿವ ಸಂಪುಟ ಟಿಪ್ಪಣಿಯನ್ನು ಸಿದ್ಧಪಡಿಸಿ ಅನುಮೋದನೆಯನ್ನು ಪಡೆದು ಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವುದು.

(ಕ್ರಮ: ನಿರ್ದೇಶಕರು, ಗ್ರಾಮೂಸೌ-2)

9. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಒಟ್ಟಾರೆ ರೂ. 250.00 ಕೋಟಿ ಅನುದಾನವನ್ನು ಸರ್ಕಾರಕ್ಕೆ ಆಧ್ಯರ್ಪಿಸಿ, ಸಾಮಾನ್ಯ ವೆಚ್ಚದಡಿ ಒದಗಿಸಿರುವ ರೂ. 76.69 ಕೋಟಿಗಳ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಗೆ ಹಾಗೂ ಎಸ್‌ಸಿಪಿ ಹಾಗೂ ಟಿಎಸ್‌ಪಿ ಅನುದಾನವನ್ನು ರೂ. 173.31 ಕೋಟಿಗಳನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ಸಚಿವರು ಸೂಚಿಸಿದರು.

**(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ, ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆಆರ್‌ಆರ್‌ಡಿಎ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು)**

10. ಗ್ರಾಮ ಸ್ವರಾಜ್ ಯೋಜನೆಯ ಬಂಡವಾಳ ಲೆಕ್ಕ ಶೀರ್ಷಿಕೆ 6515-00-800-0-03 ರಡಿ ಒದಗಿಸಲಾಗಿರುವ ರೂ. 50.00 ಕೋಟಿಗಳನ್ನು ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯ ಬಂಡವಾಳ ಲೆಕ್ಕ ಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳ ತಕ್ಕದ್ದು.

**(ಕ್ರಮ: ನಿರ್ದೇಶಕರು, ಗ್ರಾಮ ವಿಕಾಸ, ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆಆರ್‌ಆರ್‌ಡಿಎ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು)**

11. 2018-19 ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಭವನ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿಶ್ವ ವಿದ್ಯಾನಿಲಯ ಸ್ಥಾಪನೆಗೆ ನಿಗದಿಪಡಿಸಿರುವ ಅನುದಾನವನ್ನು ಬಿಡುಗಡೆ ಮಾಡಲು ಸೂಕ್ತ ಪ್ರಸ್ತಾವನೆಯೊಂದಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ನಿರ್ದೇಶಕರು, ಪಂ.ರಾಜ್ -2)**

12. ಪ್ರಸ್ತುತ 2018-19 ನೇ ಸಾಲಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳಿಗೆ ಹೆಚ್ಚುವರಿ ಅನುದಾನದ ಅಗತ್ಯತೆಯಿದ್ದಲ್ಲಿ ಪೂರಕ ಅಂದಾಜಿನಲ್ಲಿ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಿ ಸೂಕ್ತ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಂದ ಕಳುಹಿಸಿ, ಪೂರಕ ಅಂದಾಜಿನಲ್ಲಿ ಅನುದಾನವನ್ನು ಪಡೆದುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ದಿನಾಂಕ: 09.01.2019 ರೊಳಗೆ ಪಿ.ಎಂ.ಐ ಶಾಖೆಗೆ ನೀಡಲು ಸೂಚಿಸಿ, ವಂದನೆಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆಯ ಸಚಿವರು

ಸಂಖ್ಯೆ : ಗ್ರಾಅಪ/90/.ಯೋಉಮಾ/2018 ದಿನಾಂಕ: 08.01.2019

ಇವರಿಗೆ,

1. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
2. ನಿರ್ದೇಶಕರು, ಪಂಚಾಯತ್ ರಾಜ್– I.
3. ನಿರ್ದೇಶಕರು, ಪಂಚಾಯತ್ ರಾಜ್– II.
4. ನಿರ್ದೇಶಕರು, ಗ್ರಾ.ಮೂ.ಸೌ– II
5. ನಿರ್ದೇಶಕರು, ಗ್ರಾಮ ವಿಕಾಸ.
6. ನಿರ್ದೇಶಕರು, ರಸ್ತೆ ಮತ್ತು ಸೇತುವೆ.
7. ಆಂತರಿಕ ಆರ್ಥಿಕ ಸಲಹೆಗಾರರು.
8. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
9. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
10. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
11. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
12. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
13. ಅಪರ ನಿರ್ದೇಶಕರು, ಎಸ್.ಬಿ.ಎಂ.
14. ವಿಶೇಷಾಧಿಕಾರಿ (ಜಿ.ಪಂ), ಆರ್ಥಿಕ ಇಲಾಖೆ, ಕೊಠಡಿ ಸಂಖ್ಯೆ : 249(ಬಿ), ವಿಧಾನಸೌಧ.

ಪ್ರತಿ ಮಾಹಿತಿಗಾಗಿ ಸಲ್ಲಿಸಿದೆ :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.